ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರ:2794/2016

ಚಾಸಾ:1 ಪ್ರಾಸಾ:1

ದಿನಾಂಕ: 23.07.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ಜ್ಯೋತಿ |
| ತಂದೆಯ ಹೆಸರು | : | ಪ್ರಭಾಕರ ಆಚಾರಿ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಮನೆಯಲ್ಲಿ ಇರುವುದು |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಆರೋಪಿತರು ಮದುವೆಯ ಮಾತುಕತೆಗಾಗಿ ಏಪ್ರಿಲ್ 2005ರಂದು ನಮ್ಮ ಮನೆಗೆ ಬಂದಿರುತ್ತಾರೆ. ಮಾತುಕತೆಯಾದ ನಂತರ ರೂಪಾಯಿ 5 ಲಕ್ಷ ಹಣ, 40 ಪವನ್ ಚಿನ್ನವನ್ನು ವರದಕ್ಷಿಣೆಯಾಗಿ ನೀಡಬೇಕೆಂದು ಬೇಡಿರುತ್ತಾರೆ. ಆ ಕಾಲಕ್ಕೆ ನನ್ನ ತಂದೆ ಇಲ್ಲದೆ ಅಣ್ಣ ತಮ್ಮಂದಿರೇ ಮದುವೆ ಮಾಡಬೇಕಾಗಿದ್ದು, ಕೊಡಲು ಆಗುವುದಿಲ್ಲ ಎಂದು ಹೇಳಿದಾಗ ಸಂಬಂಧ ಮುಂದುವರೆಸುವುದಿಲ್ಲ ಎಂದು ಆರೋಪಿತರು ಹೇಳಿದಾಗ 20 ಪವನ್ ಚಿನ್ನ ಹಾಗೂ 2 ಲಕ್ಷ ಹಣ ಕೊಡಬೇಕೆಂದು ಕೇಳಿದಾಗ ಅದಕ್ಕೆ ಒಪ್ಪಿಕೊಂಡು ದಿ: 18-11-2005 ರಂದು ಕೊಟೇಶ್ವರದ ಸರಸ್ವತಿ ಕಲ್ಯಾಣ ಮಂಟಪದಲ್ಲಿ 1ನೇ ಆರೋಪಿಯೊಂದಿಗೆ ವಿವಾಹವಾಗಿರುತ್ತದೆ.

ಮದುವೆಗೂ ಮೊದಲು ಆರೋಪಿತರು ಮನೆಗೆ ಬಂದು ಅವರು ಬೇಡಿದ ವರದಕ್ಷಿಣೆಯನ್ನು ಪಡೆದುಕೊಂಡು ಹೋಗಿರುತ್ತಾರೆ. ಮದುವೆಗೆ 24 ಪವನ್ ಚಿನ್ನ ಹಾಕಿದ್ದು, ಅದರಲ್ಲಿ ದೊಡ್ಡ ನೆಕ್ಲೇಸು, ಬಳೆಗಳು-8, 6 ಉಂಗುರಗಳು, 2 ಜೊತೆ ಕಿವಿಯೋಲೆ, ಲಾಂಗ್ ಚೈನು, 1ನೆ ಆರೋಪಿಗೆ ಒಂದು ಚಿನ್ನದ ಚೈನು, ಒಂದು ಬ್ರೇಸ್ ಲೈಟ್, ಚಿನ್ನದ ಒಂದು ಜನಿವಾರ ಹಾಕಿರುತ್ತಾರೆ. ಮದುವೆಯ ಖರ್ಚನ್ನು ನಾವೇ ಭರಿಸಿರುತ್ತೇವೆ.

ಮದುವೆಯಾದ ನಂತರ ಬೆಂಗಳೂರಿನ ಅನುಭವ ನಗರಕ್ಕೆ ಕರೆದುಕೊಂಡು 1ನೇ ಆರೋಪಿಯೊಂದಿಗೆ ಸ್ವಂತ ಮನೆಯಲ್ಲಿ ವಾಸಿಸಲು ಹೋಗಿರುತ್ತೇನೆ. 4 ಮತ್ತು 5 ನೇ ಆರೋಪಿತರು ಪಕ್ಕದ ರಸ್ತೆಯಲ್ಲಿ ವಾಸವಿದ್ದು ಅವರು ಆಗಾಗ ಬಂದು ಹೋಗುತ್ತಿದ್ದರು. 2 ಮತ್ತು 3ನೇ ಆರೋಪಿತರು ಬೇರೆ ಮನೆಯಲ್ಲಿ ವಾಸವಿದ್ದರು, ಅವರು ಸಹ ಆಗಾಗ ಬಂದು ಹೋಗುತ್ತಿದ್ದರು.

1ನೇ ಆರೋಪಿ ವ್ಯವಹಾರ ನಡೆಸುತ್ತಿದ್ದು, ಮದುವೆಯಾದ 2 ತಿಂಗಳ ನಂತರ ವರದಕ್ಷಿಣೆ ನೀಡಿರುವುದು ಸಾಲದು ಎಂದು ತಕರಾರು ತೆಗೆದಿದ್ದು, ಮದುವೆಗೆ ಹಾಕಿದ್ದ ಚಿನ್ನವನ್ನು 1ನೇ ಆರೋಪಿ ನೋಡಿ ಕೊಡುವುದಾಗಿ ಪಡೆದುಕೊಂಡು ಅನಂತರ ಈವರೆಗೂ ಹಿಂದಿರುಗಿಸಿಲ್ಲ. ಹಣವನ್ನು ವಾಪಸ್ಸು ಕೊಟ್ಟಿಲ್ಲ. ನಾನು ನ್ಯೂ ಹಾರಿಜಾನ್ ಕಾಲೇಜಿನಲ್ಲಿ ಲ್ಯಾ ಬ್ ಇನಸ್ಟ್ರಕ್ಟರ್ ಆಗಿ ಕೆಲಸ ಮಾಡುತ್ತಿದ್ದು, ನನ್ನ ಸಂಬಳ ಮತ್ತು ಡೆಬಿಟ್ ಕಾರ್ಡ ನ್ನು 1ನೇ ಆರೋಪಿ ಇಟ್ಟು ಕೊಂಡಿದ್ದು ನಾನು ನಿಷ್ಪ್ರಯೋಜಕಳು ಎಂದು ಅವಾಚ್ಯವಾಗಿ ನಿಂಧಿಸಿರುತ್ತಾರೆ. ಆಗಾಗ ನನಗೆ ಹೊಡೆದು ಜೀವ ಬೆದರಿಕೆ ಹಾಕಿರುತ್ತಾರೆ. ಖಾಲಿ ಚೆಕ್ಕಿನ ಮೇಲೆ ನನ್ನ ಸಹಿ ಪಡೆದು ಅದನ್ನು ಬೇರೆಯವರಿಗೆ ಹಾಜರುಪಡಿಸಿ ಅಮಾನ್ಯಗೊಂಡಿದ್ದು ಸಿಸಿ ನಂಬ್ರ 1143/20009 ಶಿಕಾರಿಪುರದ ನ್ಯಾಯಾಲಯದಲ್ಲಿ ನನ್ನ ವಿರುದ್ದ ಆದೇಶವಾಗಿದ್ದು, ಅದರಲ್ಲಿ ಆದೇಶವಾಗಿರುವ ಮೊತ್ತವನ್ನು ನಾನು ಈಗ 1ನೇ ಆರೋಪಿಯ ಈ ವಂಚನೆಯಿಂದ ಪಾವತಿಸಬೇಕಾಗಿರುತ್ತದೆ. ಅಲ್ಲದೇ ನಾನು 1ನೇ ಆರೋಪಿಯ ವಿರುದ್ದ ಎಂ.ಸಿ ನಂಬ್ರ 4/2017ರಂತೆ ವಿವಾಹ ವಿಚ್ಛೇಧನೆಗಾಗಿ ಸಲ್ಲಿಸಿದ್ದ ಅರ್ಜಿಯಲ್ಲಿ ಯಾವುದೇ ಜೀವನಾಂಶ ನನ್ನ ಪರವಾಗಿ ಆದೇಶವಾಗಿರುವುದಿಲ್ಲ. ಸದ್ರಿ ಆದೇಶಗಳ ಪ್ರತಿಯನ್ನು ಮುಂದಕ್ಕೆ ಹಾಜರುಪಡಿಸುತ್ತೇನೆ.

ಮೇಲೆ ಹೇಳಿದ್ದನ್ನು ಹೊರತುಪಡಿಸಿ 4-5 ಖಾಲಿ ಚೆಕ್ಕುಗಳು ನಾನು ಸಹಿ ಮಾಡಿದ್ದು 1ನೇ ಆರೋಪಿಯ ಬಳಿಯೇ ಉಳಿದಿರುತ್ತದೆ. ಅನಾರೋಗ್ಯವಿದ್ದಾಗ ಎಂದಿಗೂ ಆರೋಪಿಯು ನನ್ನನ್ನು ನೋಡಿಕೊಂಡಿಲ್ಲದೆ, 2011ರಲ್ಲಿ ನನಗೆ ಶಸ್ತ್ರಚಿಕಿತ್ಸೆಯಾಗಿದ್ದು, ಆರೋಪಿ ಯಾವುದೇ ರೀತಿಯ ಉಪಚಾರ ಮಾಡಿರುವುದಿಲ್ಲ. ನನ್ನ ತಮ್ಮ ಬಂದು ಚಿಕಿತ್ಸೆಯ ವೆಚ್ಚವನ್ನು ಭರಿಸಿರುತ್ತಾರೆ.

ಆರೋಪಿತರು ನನ್ನ ಮನೆಯವರನ್ನು ಕರೆಯಿಸಿ ಖರ್ಚು ವೆಚ್ಚವನ್ನು ಭರಿಸುವಂತೆ ಸೂಚಿಸಿರುತ್ತಾರೆ.

2013 ಮೇ ರಲ್ಲಿ ನಾನು ಅನಾರೋಗ್ಯದಿಂದ ಬಳಲುತ್ತಿದ್ದು, ಈ ಹಿನ್ನೆಲೆ ನನ್ನ ತಮ್ಮ ಬಂದು ವೈದ್ಯರ ಬಳಿ ಕುಂದಾಪುರದಲ್ಲಿ ಚಿಕಿತ್ಸೆ ಕೊಡಿಸುವುದಾಗಿ ನನ್ನನ್ನು ಕರೆ ತಂದಿದ್ದು ಆರೋಪಿಯು ಆತನ ಅನುಮತಿ ಇಲ್ಲದೆ ನನ್ನನ್ನು ಕರೆದುಕೊಂಡು ಹೋಗಿರುವುದಾಗಿ ಅಪಾದಿಸಿ ನನ್ನ ವಿರುದ್ದ ಅಸಂಬದ್ದ ಆಪಾದನೆಗಳನ್ನು ಹೊರಿಸಿ ವಿವಾಹ ವಿಚ್ಚೇಧನೆ ನೀಡುವುದಾಗಿ ನನ್ನ ಸಂಬಂಧಿಕರಿಗೆ ಹೇಳಿರುತ್ತಾನೆ. ಅನಂತರ ನಾನು ಗರ್ಭಿಣಿಯಾಗಿರುವ ವಿಚಾರ ತಿಳಿದು ಬಂದರೂ ಆ ಬಗ್ಗೆ ನನ್ನ ಕಾಳಜಿ ವಹಿಸದೆ ಮನೆ ಬಿಟ್ಟು ಹೋಗಿದ್ದು ವಾಪಸ್ಸು ಬರಬಾರದಂತೆ ತಿಳಿಸಿರುತ್ತಾನೆ.

ಅನಂತರ ಸೀಮಂತ ಕಾರ್ಯಕ್ರಮ ಮಾಡುವುದಾಗಿ ಆರೋಪಿತರು ಕರೆದುಕೊಂಡು ಹೋಗಿದ್ದು ಅದಕ್ಕೂ ಮೊದಲು ಆರೋಪಿಯ ಸಂಬಂಧಿ ಮಧ್ಯಸ್ಥಿಕೆ ವಹಿಸಿ ರಾಜಿ ಮಾಡಿಸುವುದಾಗಿ ತಿಳಿಸಿದ ಮೇರೆಗೆ ನಾನು ಒಪ್ಪಿ ಅಲ್ಲಿಗೆ ಹೋಗಿದ್ದು ಆಗಲೂ ಮಾನಸಿಕವಾಗಿ ಕಿರುಕುಳ ನೀಡಿದ್ದು ನಾನು ತಾಳಲಾರದೆ ವಾಪಸ್ಸು ತಾಯಿ ಮನೆಗೆ ಬಂದಿರುತ್ತೇನೆ.

ದಿಃ 27-12-2013 ರಂದು ನಾನು ಗಂಡು ಮಗುವಿಗೆ ಜನ್ಮ ನೀಡಿರುತ್ತೇನೆ. ಕುಂದಾಪುರದಲ್ಲಿ ಮಗುವಿನ ನಾಮಕರಣ ಮಾಡಲು ಮೇಲೆ ಹೇಳಿದ ಆರೋಪಿಯ ಸಂಬಂಧಿ ಮಧ್ಯಸ್ಥಿಕೆ ವಹಿಸಿ ನಾಮಕರಣವನ್ನು ಮಾಡಿರುತ್ತೇವೆ. ಆದಾಗಿ 4 ತಿಂಗಳ ನಂತರ ಆರೋಪಿಯ ಸಂಬಂಧಿಯಾದ ಮುಕುಂದರವರು ಮೃತಪಟ್ಟಿದ್ದು ಅನಂತರ ಆರೋಪಿಯೊಂದಿಗೆ ಯಾವುದೇ ಸಂಪರ್ಕ ಇರಲಿಲ್ಲ. ನನ್ನನ್ನು ಮತ್ತು ಮಗುವನ್ನು ವಾಪಸ್ಸು ಕರೆದುಕೊಂಡು ಹೋಗಬೇಕಾದರೆ ರೂಪಾಯಿ 2 ಲಕ್ಷ ಹಣವನ್ನು ಕೊಡಬೇಕೆಂದು ಪುನಃ ಬೇಡಿಕೆ ಇಟ್ಟಿರುತ್ತಾನೆ. ಅನಂತರದಲ್ಲಿ ನನ್ನನ್ನು ಮತ್ತು ನನ್ನ ಮಗುವನ್ನು ನೋಡಲು ಬಂದಿರುವುದಿಲ್ಲ. ಈ ವರೆಗೂ ನಮ್ಮ ಯಾವುದೇ ಖರ್ಚು ವೆಚ್ಚವನ್ನು ಆರೋಪಿ ಭರಿಸಿರುವುದಿಲ್ಲ.

ದಿಃ 26-04-2016 ರಂದು ನ್ಯಾಯಾಲಯದಲ್ಲಿ ಖಾಸಗಿ ದೂರನ್ನು ಸಲ್ಲಿಸಿರುತ್ತೇನೆ. ದಿಃ 16-05-2016 ರಂದು ಪೊಲೀಸರು ಕುಂದಾಪುರದ ನಮ್ಮ ಮನೆಗೆ ಭೇಟಿ ನೀಡಿ ಪಂಚನಾಮೆಯನ್ನು ಜರುಗಿಸುವ ವೇಳೆಗೆ ಚಾಸಾ-10 ಮತ್ತು 11 ರವರು ಹಾಜರು ಇದ್ದು,

ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಬೆಳಗ್ಗೆ 10 ರಿಂದ 11 ರವರೆಗೂ ಜರುಗಿಸಿ ಪೋಟೋ ತೆಗೆದಿರುತ್ತಾರೆ.

ದಿಃ 15-06-2016 ರಂದು ಬೆಂಗಳೂರಿನ ಆರೋಪಿಯ ಮನೆಗೆ ಪೊಲೀಸರನ್ನು ಕರೆದುಕೊಂಡು ಹೋಗಿದ್ದು ಪಂಚರಾಗಿ ಚಾಸಾ-2 ಮತ್ತು 12 ರವರು ಹಾಜರು ಇದ್ದರು. ಸದ್ರಿ ಕ್ರಮವನ್ನು ಮಧ್ಯಾಹ್ನ 12-15 ರಿಂದ 1 ಗಂಟೆಯವರೆಗೂ ಜರುಗಿಸಿ ಪೋಟೋ ತೆಗೆದಿರುತ್ತಾರೆ.

ದಿಃ 31-07-2016 ರಂದು ಕುಂದಾಪುರದ ಪೊಲೀಸ್ ಠಾಣೆಯಲ್ಲಿ ಮದುವೆಯ ದಾಖಲಾತಿಗಳನ್ನು ಹಾಜರುಪಡಿಸುವ ವೇಳೆಗೆ ಪಂಚನಾಮೆಯನ್ನು ಪಂಚರಾದ ಚಾಸಾ-11 ರವರ ಸಮಕ್ಷಮ ನಾನು ಚಿನ್ನ ಖರೀಧಿಸಿದ ಬಗ್ಗೆ ಹಾಜರುಪಡಿಸಿದ ರಶೀದಿಗಳು, ವಿವಾಹದ ಆಮಂತ್ರಣ ಪತ್ರ, ಪೋಟೋಗಳು, ಸರಸ್ವತಿ ಕಲ್ಯಾಣ ಮಂಟಪದ ರಶೀದಿ, ಮಗು ಜನನವಾದ ಬಗ್ಗೆ ರಶೀದಿಗಳು, ಜನನ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ವಶಕ್ಕೆ ಪಡೆದಿರುತ್ತಾರೆ. ಸದ್ರಿ ಕ್ರಮವನ್ನು ಸಂಜೆ 5-05 ರಿಂದ 6 ಗಂಟೆಯವರೆಗೂ ಜರುಗಿಸಿರುತ್ತಾರೆ.

ಅನಂತರ ಪೊಲೀಸರು ನನ್ನ ಮರುಹೇಳಿಕೆಯನ್ನು ಪಡೆದಿರುವುದಿಲ್ಲ. 1 ಮತ್ತು 3ನೇ ಆರೋಪಿತರ ಸಮಕ್ಷಮ 2ನೇ ಆರೋಪಿಯು ನನಗೆ ಹೊಡೆದಿದ್ದು, 4 ಮತ್ತು 5ನೇ ಆರೋಪಿತರು ಕುಮ್ಮಕ್ಕು ನೀಡಿರುತ್ತಾರೆ. 2ನೇ ಆರೋಪಿ ವಿರುದ್ದ ಈ ಪ್ರಕರಣವನ್ನು ಕೈಬಿಡಲಾಗಿರುತ್ತದೆ. ಈ ವಿಚಾರವಾಗಿ ನಾನು ಪೊಲೀಸರಿಗೆ ಮರುಹೇಳಿಕೆ ನೀಡಿಲ್ಲದೆ 2 ರಿಂದ 5ನೇ ಆರೋಪಿತರ ವಿರುದ್ದ ಕ್ರಮ ಕೈಗೊಳ್ಳಬೇಕಾಗಿ ಕೋರಿಕೊಳ್ಳುತ್ತೇನೆ.

ಈಗ ನನ್ನ ಮತ್ತು ಮಗನ ಖರ್ಚು ವೆಚ್ಚವನ್ನು ನನ್ನ ತಾಯಿ ಮನೆಯವರು ನೋಡಿಕೊಳ್ಳುತ್ತಿದ್ದಾರೆ.

ಸಾಕ್ಷಿ ದೂರು, ದಿಃ 16-05-2016, 15-06-2015 ರ 2 ಸ್ಥಳ ಪಂಚನಾಮೆ, 2 ಪೋಟೋ, ದಿಃ 31-07-2016ರ ಸ್ವತ್ತು ಸ್ವಾಧೀನತಾ ಪಂಚನಾಮೆ, 8 ರಶೀದಿಗಳು, ವಿವಾಹ ಆಮಂತ್ರಣ ಪತ್ರ, 5 ಪೋಟೋಗಳು, ಆಸ್ಪತ್ರೆಯ ಬಿಲ್ಲು, ಮಗುವಿನ ಜನನ ಪ್ರಮಾಣ ಪತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-1 ರಿಂದ 22 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ರಿಂದ 3(ಎ) ಮತ್ತು 6(ಎ) ಎಂದು ಗುರುತಿಸಲಾಯಿತು.

**(ಮುಂದುವರೆದ ಮುಖ್ಯ ವಿಚಾರಣೆಯನ್ನು ಸ.ಸ.ಅರವರ ಕೋರಿಕೆ ಮೇರೆಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**